# ರಂಗಕಲಾವಿದೆಯರ ಬದುಕಿನಲ್ಲಿ ಕಾಡಿದ ಅಭದ್ರತೆ

ರವಿ ಎನ್.ಸಿ.*

DOI: https://doi.org/10.5281/zenodo.22107252

**ABSTRACT**

ರಂಗಭೂಮಿಯ ನಟ–ನಟಿಯರಿಗೆ ಬದುಕಿನಲ್ಲಿ ಕಾಡಿದ ಅಭದ್ರತೆಗಳು ಹಲವು. ವೃತ್ತಿರಂಗಭೂಮಿ ಕಲಾವಿದೆಯರಿಗೆ ನಿಗದಿತ ನಿಶ್ಚಿತ ಆದಾಯವಿಲ್ಲದ್ದರಿಂದ ಸದಾ ಹೊಯ್ದಾಟದ ಬದುಕು ಅವರದ್ದಾಗಿತ್ತು. ವೃತ್ತಿರಂಗಭೂಮಿಯ ನಟಿಯರಿಗೆ ತಮ್ಮ ಕುಟುಂಬದ ಮಕ್ಕಳ ಶಿಕ್ಷಣದ್ದೇ ಒಂದು ದೊಡ್ಡ ಚಿಂತೆಯಾಗಿತ್ತು. ಪ್ರತಿಯೊಬ್ಬ ರಂಗಕಲಾವಿದೆಯೂ ತಾನು ಚೆನ್ನಾಗಿ ದುಡಿಯುವಾಗ ತಮ್ಮ ಮುಂದಿನ ವೃದ್ಧಾಪ್ಯದ ಬದುಕಿಗೆ ಏನನ್ನೂ ಕೂಡಿಟ್ಟುಕೊಂಡಿಲ್ಲ. ರಂಗಕಲಾವಿದರನ್ನು ದೇಹದಲ್ಲಿ ಶಕ್ತಿ, ಕಸುವು ಇರುವವರೆಗೂ, ಯೌವ್ವನ ಇರುವವರೆಗೂ, ಕಂಪನಿಗಳು ದುಡಿಸಿಕೊಳ್ಳುತ್ತವೆ. ಯಾವ ಕಂಪನಿಗಳಿಗಾಗಿ ಆ ಕಲಾವಿದರು ದುಡಿದಿದ್ದರೋ ವೃದ್ಧಾಪ್ಯದಲ್ಲಿ ಆ ಕಂಪನಿಗಳು ಅವರತ್ತ ತಿರುಗಿಯೂ ನೋಡಿಲ್ಲ. ಇವರಿಗೆ ಸರ್ಕಾರದಿಂದ ಪುನರ್ವಸತಿ ಕಲ್ಪಿಸಬೇಕಾದ ಅಗತ್ಯವಿದೆ.

**KEYWORDS:** ಅಭದ್ರತೆ, ವೃದ್ಧಾಪ್ಯ, ವೈವಾಹಿಕ, ಪುನರ್ವಸತಿ, ಅಲೆಮಾರಿ, ನಶ್ವರ.

ರಂಗಭೂಮಿಯ ನಟ–ನಟಿಯರಿಗೆ ಬದುಕಿನಲ್ಲಿ ಕಾಡಿದ ಅಭದ್ರತೆಗಳು ಹಲವು. ಮುಖ್ಯವಾಗಿ ಅವರಿಗೆ ತಿಂಗಳಿಗೆ ಅಥವಾ ವರ್ಷಕ್ಕೆ ಇಂತಿಷ್ಟೇ ಎಂದು ನಿಗದಿತ ಆದಾಯವಿರಲಿಲ್ಲ. ಕಂಪನಿಗಳು ಒಂದೂರಿನಿಂದ ಮತ್ತೊಂದೂರಿಗೆ ಎನ್ನುವಂತೆ ವರ್ಷಪೂರ್ತಿ ತಿರುಗುತ್ತಿದ್ದುದರಿಂದ ಒಂದು ರೀತಿಯಲ್ಲಿ ಅಲೆಮಾರಿ ಬದುಕಿನಂತಿದ್ದು ಅವರಿಗೆ ನೆಮ್ಮದಿ ಇರಲಿಲ್ಲ. ವೃತ್ತಿ ರಂಗಭೂಮಿಯಲ್ಲಿ ಕಲಾವಿದೆಯರು ಬಹುತೇಕ ಹೊರಗಿನವರನ್ನು ವಿವಾಹವಾಗದೇ ರಂಗದಲ್ಲಿರುವವರನ್ನೇ ಅಥವಾ ತಮ್ಮ ವೃತ್ತಿಯನ್ನು ಮುಂದುವರಿಸಲು ಸಹಕರಿಸುವಂತಹವರನ್ನೇ ವಿವಾಹವಾಗಿದ್ದರು. ಕೆಲವೊಂದು ರಂಗನಟಿಯರು ಮರಿಯಮ್ಮನ ಹಳ್ಳಿ ನಾಗರತ್ನಮ್ಮರಂತಹ ಕಲಾವಿದೆಯರು ಬಹುಬೇಗ ಆ ವೈವಾಹಿಕ ಚೌಕಟ್ಟಿನಿಂದ ಹೊರಬಂದರು. ಹೀಗಿದ್ದರಿಂದ ರಂಗನಟಿಯರಲ್ಲಿ ಬಹುತೇಕರಿಗೆ ಅಭದ್ರತೆಯ ಭಾವ ಕಾಡುತ್ತಿತ್ತು. "ಈ ಕಾರಣಕ್ಕಾಗಿ ನೆಮ್ಮದಿಯಿಲ್ಲದ ಕುಟುಂಬದ ಸದಸ್ಯರಾಗಿದ್ದ ನಟರು ಚಿಂತೆ ಮತ್ತು ನೋವುಗಳನ್ನು ಮರೆಯಲು ಮದ್ಯಕ್ಕೆ ಶರಣಹೋಗಿದ್ದರು. ಈ ಚಟ ಅವರಲ್ಲಿದ್ದ ಸ್ಥಿರತೆಯನ್ನು ನಿಷ್ಠೆಯನ್ನು ಹಾಳುಮಾಡಿತು"[1] ಎನ್ನುತ್ತಾರೆ ವೃತ್ತಿರಂಗಕಲಾವಿದರಾದ

* **ಡಾ. ರವಿ ಎನ್.ಸಿ.,** ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಸರ್ಕಾರಿ ವಿಜ್ಞಾನ ಕಾಲೇಜು (ಸ್ವಾಯತ್ತ ), ಹಾಸನ.

ಡಾ. ಲಕ್ಷ್ಮಣ ಕೌಂಟೆ. ಬಹುತೇಕ ವೃತ್ತಿರಂಗಭೂಮಿಯ ನಟಿಯರು ಒಂದು ಕಂಪನಿಯಿಂದ ಮತ್ತೊಂದು ಕಂಪನಿಗೆ ಎಡತಾಕಿದ್ದಾರೆ. ಬಹುಶಃ ಅವರಲ್ಲಿ ಈ ಅಭದ್ರತೆಯ ಭಾವವಿದ್ದರಿಂದಲೇ ಹೀಗಾಗಿರಬೇಕು ಎನ್ನಿಸುತ್ತದೆ.

ರಂಗಕಲಾವಿದೆಯರು ಅನಾರೋಗ್ಯ ಪೀಡಿತರಾದಾಗ ಕಂಪನಿಗಳು ಅವರ ಸಹಾಯಕ್ಕೆ ಬಂದಿರುವುದಿಲ್ಲ. ತಮ್ಮ ವೃತ್ತಿ ಬದುಕಿನಲ್ಲಿ ರಂಗಮಂದಿರದಲ್ಲಿ ತಮ್ಮ ಪ್ರತಿಭೆ ಮೆರೆದು ಸಹಸ್ರಕಲಾಭಿಮಾನಿ ಪ್ರೇಕ್ಷಕರಿಂದ ಚಪ್ಪಾಳೆ ತಟ್ಟಿಸಿಕೊಂಡು, ಶಿಳ್ಳೆ ಹಾಕಿಸಿಕೊಂಡು, ಹಾರ–ತುರಾಯಿ, ಪಾರಿತೋಷಕ ಪ್ರಶಸ್ತಿಗಳನ್ನು ಸ್ವೀಕರಿಸಿದವರು ತಮ್ಮ ವೃದ್ಧಾಪ್ಯದ ದಿನಗಳಲ್ಲಿ ಆರ್ಥಿಕ ಸವಾಲುಗಳನ್ನೆದುರಿಸುತ್ತಾ ಅಭದ್ರತೆಯ ಜೀವನ ನಡೆಸಿದ್ದಾರೆ. ವೃತ್ತಿಯ ದಿನಗಳಲ್ಲಿ ದುಡಿಯುವಾಗ ಅವರಿಗೆ ಕಾಲ, ಸಮಯ ಸಂದಿದ್ದೇ ಗೊತ್ತಾಗಿರುವುದಿಲ್ಲ. ಆಗಿನಿಂದಲೇ ತಮ್ಮ ವೃದ್ಧಾಪ್ಯದ ಭವಿಷ್ಯದ ಜೀವನಕ್ಕೆ ಇಂತಿಷ್ಟು ಹಣವೆಂದು ಉಳಿಸಿಕೊಂಡಿರುವುದಿಲ್ಲ. ಶಾಂತಾ ಹುಬ್ಬಳ್ಳಿರ್ ರಂತಹ ಕಲಾವಿದೆ ಮರಾಠಿ ಚಲನಚಿತ್ರ ಕ್ಷೇತ್ರದಲ್ಲಿ ಮಿಂಚಿ, ಸಾಕಷ್ಟು ಸಂಪಾದನೆ ಮಾಡಿದ್ದರೂ ಆಕೆಯ ಗಂಡ ಗಿತೆ ಮತ್ತು ಅವರ ಮಗ ಶಾಂತಾರಿಗೆ ಏನನ್ನೂ ಉಳಿಸಲಿಲ್ಲ. ಹೀಗೆ ರಂಗಕಲಾವಿದೆಯರು ತಮ್ಮ ಬದುಕಿನ ಸಂಧ್ಯಾಕಾಲದಲ್ಲಿ ರಂಗುರಂಗಿನ ಯೌವ್ವನವನ್ನು ಕಳೆದುಕೊಂಡು ವೃತ್ತಿ ಜೀವನವನ್ನು ಮುಗಿಸಿದ ನಂತರ ವೃದ್ಧಾಪ್ಯದಲ್ಲಿ ಗಲಿಬಿಲಿಗೊಂಡು ಅವರಿವರ ಸಹಾಯ ನಿರೀಕ್ಷಿಸುತ್ತಾ ಬದುಕಿದ್ದಾರೆ. ಮುಂದಿನ ಬದುಕಿನ ನಿಶ್ಚಿತ ಮಾರ್ಗ ಕಾಣದೆ ಕಂಗಾಲಾಗಿದ್ದಾರೆ. ವೃತ್ತಿರಂಗಭೂಮಿಯ ಕೆಲವು ಕಂಪನಿಗಳು ಒಂದೇ ರೀತಿಯ ಆಡಿದ ನಾಟಕಗಳನ್ನೇ ಪದೇ ಪದೇ ಪ್ರದರ್ಶಿಸುತ್ತಾರೆ. ಊರಿಗೆ ಬಂದ ಪ್ರತಿ ಕಂಪನಿಯು ಅದೇ ನಾಟಕವಾಡಿದರೆ ಯಾವ ಪ್ರೇಕ್ಷಕನು ಎಷ್ಟು ಬಾರಿ ನೋಡಿದ್ದನ್ನೇ ನೋಡುವನು? ಹೀಗೆ ವೃತ್ತಿನಾಟಕ ಕಂಪನಿಗಳು ಚರ್ವಿತಚರ್ವಣವಾಗಿ ಹೊಸತನಕ್ಕೆ ಹೊಂದಿಕೊಳ್ಳದೆ ಸೊರಗಿದಾಗ ಕಲಾವಿದೆಯರು ಆರ್ಥಿಕ ಅಭದ್ರತೆಗೊಳಗಾಗಿ ಅತಂತ್ರ ಸ್ಥಿತಿ ಅನುಭವಿಸಿದರು.

ವೃತ್ತಿರಂಗಭೂಮಿಯ ನಟಿಯರಿಗೆ ತಮ್ಮ ಕುಟುಂಬದ ಮಕ್ಕಳ ಶಿಕ್ಷಣದ್ದೇ ಒಂದು ದೊಡ್ಡ ಚಿಂತೆಯಾಗಿತ್ತು. ಯಾಕೆಂದರೆ ಇವರದು ಒಂದೂರಿಂದ ಮತ್ತೊಂದೂರಿಗೆ ಕಂಪನಿ ಜೊತೆ ಅಲೆಮಾರಿಯಂತೆ ಬದುಕುವ ಬದುಕಾದ್ದರಿಂದ ಒಂದೇ ಶೈಕ್ಷಣಿಕ ವರ್ಷದಲ್ಲಿ ಒಂದೇ ಕಡೆ ನೆಲೆ ನಿಲ್ಲುವಂತಿರಲಿಲ್ಲ. ಯಾಕೆಂದರೆ ಕ್ಯಾಂಪ್ ಸದಾ ಸಂಚಾರಿ. ದೊಡ್ಡ ದೊಡ್ಡ ಕಂಪನಿಗಳಾದರೆ ದೊಡ್ಡ ನಗರ ಪಟ್ಟಣಗಳಲ್ಲಿ ವರ್ಷಪೂರ್ತಿ ಕೆಲವೊಮ್ಮೆ ನೆಲೆ ನಿಲ್ಲುವುದಿತ್ತು. ಆದರೆ ಸಣ್ಣ, ಮಧ್ಯಮ ಕಂಪನಿಗಳು ದೊಡ್ಡ ದೊಡ್ಡ ಗ್ರಾಮಗಳನ್ನೇ ಆಶ್ರಯಿಸಿ ಸದಾ ತಿರುಗಬೇಕಾಗಿತ್ತು. ಸಂದರ್ಭಕ್ಕನುಸಾರವಾಗಿ ಕೆಲವೊಮ್ಮೆ ಬೇಗ ಕ್ಯಾಂಪ್ ಮುಕ್ತಾಯಗೊಳ್ಳುತ್ತಿತ್ತು. ಹೀಗಾಗಿ ರಂಗಕಲಾವಿದೆಯರು ತಮ್ಮ ಮಕ್ಕಳಿಗೆ ಮತ್ತು ಕುಟುಂಬದ ಸದಸ್ಯರ ಮಕ್ಕಳಿಗೆ ತಾವಿದ್ದೆಡೆ ಶಿಕ್ಷಣ ಕೊಡಿಸುವುದು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ತಾವು ತಮ್ಮ ಕುಟುಂಬದ ಮಕ್ಕಳ ಶಿಕ್ಷಣಕ್ಕೆ ಒಂದೆಡೆ ಓದಲು ಪ್ರತ್ಯೇಕವಾದ ವ್ಯವಸ್ಥೆ ಮಾಡಬೇಕಾದ ಅನಿವಾರ್ಯತೆ ಇರುತ್ತಿತ್ತು. ಮಕ್ಕಳಿಗೆ ಅಗತ್ಯವಾದಾಗ ಹಣ ಕಳುಹಿಸುವ ಜವಾಬ್ದಾರಿಯನ್ನು ರಂಗಕಲಾವಿದೆಯರು ನಿಭಾಯಿಸುತ್ತಿದ್ದರು. ಇದಲ್ಲದೆ ತಮ್ಮ ಕುಟುಂಬದ ಇತರೆ ಸದಸ್ಯರೊಂದಿಗೆ ಮನೆ ಮಾಡಿಸಿಕೊಟ್ಟು, ತಮ್ಮ ಮಕ್ಕಳ ಜವಾಬ್ದಾರಿಯನ್ನು ಅವರಿಗೆ ವಹಿಸುತ್ತಿದ್ದರು. ಕುಟುಂಬದ ಇಂತಹ ಸದಸ್ಯರ ಖರ್ಚುವೆಚ್ಚಗಳನ್ನೆಲ್ಲಾ ಅಂತಹ ರಂಗಕಲಾವಿದೆಯರು ನಿರ್ವಹಿಸುತ್ತಿದ್ದರು. ಇದಕ್ಕೆ ಪ್ರತ್ಯುಪಕಾರವೆಂಬಂತೆ ಕುಟುಂಬದ ರಕ್ತಸಂಬಂಧಿಗಳ ಮಕ್ಕಳನ್ನೆಲ್ಲಾ ಓದಿಸಿ, ಅವರಿಗೆ ನೌಕರಿ ಕೊಡಿಸಿ, ಅವರಿಗೆ ಮದುವೆ

ಮಾಡಿಸಿ, ಭವಿಷ್ಯಕಟ್ಟಿಕೊಡುವ ಜವಾಬ್ದಾರಿಯನ್ನು ರಂಗಕಲಾವಿದೆಯರು ತಾವು ನಿರ್ವಹಿಸುವುದನ್ನು ತಮ್ಮ ಆತ್ಮಕಥೆಗಳಲ್ಲಿ ಅನೇಕರು ವಿವರವಾಗಿ ದಾಖಲಿಸಿದ್ದಾರೆ. ಹೀಗೆ ತಮ್ಮ ಮಕ್ಕಳನ್ನು ಬೇರೆ ಕಡೆ ಮನೆ ಮಾಡಿಟ್ಟು, ಇಲ್ಲವೆ ಹಾಸ್ಟೆಲ್ ನಲ್ಲಿ ಬಿಟ್ಟು ಓದಿಸಿದ್ದಾರೆ. ರಂಗಕಲಾವಿದೆಯರು ತಮ್ಮ ಮಕ್ಕಳನ್ನು ತಮ್ಮೊಂದಿಗೆ ಇಟ್ಟುಕೊಂಡಿದ್ದರೆ ಕ್ಯಾಂಪ್ ಇರುವ ಊರಿನ ಶಾಲೆಗಳಲ್ಲಿ ಅಗತ್ಯವಾದಷ್ಟೇ ಶಿಕ್ಷಣವನ್ನು ಅವರಿಗೆ ಕೊಡಿಸಬೇಕಾಗುತ್ತಿತ್ತು. ಹೀಗೆ ತಮ್ಮ ಕಲಾವಿದರಾದ, ಕಲಾವಿದೆಯರಾದ ತಂದೆ ತಾಯಿಗಳ ಮಕ್ಕಳು, ರಂಗಭೂಮಿಯ ಸೇವೆಯ ಕಾರಣಕ್ಕಾಗಿ ಹೆಚ್ಚು ಓದದೆ ತಾವು ಅತಂತ್ರ ಉದ್ಯೋಗಸ್ಥರಾಗಿ, ಹೇಗೋ ಬದುಕನ್ನು ನಿರ್ವಹಿಸಿದ ಕಲಾವಿದೆಯರ ಮಕ್ಕಳ ಅಭದ್ರ ಸ್ಥಿತಿಗೂ ರಂಗಭೂಮಿಯಲ್ಲಿ ಉದಾಹರಣೆಗಳಿವೆ.

ವೃತ್ತಿರಂಗಭೂಮಿಯ ಬಹುತೇಕ ಕಲಾವಿದ, ಕಲಾವಿದೆಯರ ಬದುಕು ಅತಂತ್ರದಿಂದ ಅಭದ್ರತೆಯಿಂದ ಕೂಡಿದ್ದಾಗಿತ್ತು. ಯಾವ ಕಂಪನಿಗಳಿಗಾಗಿ ಆ ಕಲಾವಿದರು ದುಡಿದಿದ್ದರೋ ವೃದ್ಧಾಪ್ಯದಲ್ಲಿ ಆ ಕಂಪನಿಗಳು ಅವರತ್ತ ತಿರುಗಿಯೂ ನೋಡಿಲ್ಲ. ಕಲಾವಿದೆಯರು ವೃದ್ಧರಾದಾಗ ಅಥವಾ ಆರ್ಥಿಕವಾಗಿ ಅಶಕ್ತರಾದಾಗ, ಅನಾರೋಗ್ಯ ಪೀಡಿತರಾದಾಗ ಅವರೇ ತಮ್ಮ ಎಲ್ಲಾ ಖರ್ಚುವೆಚ್ಚಗಳನ್ನು ನಿಭಾಯಿಸಬೇಕು. ರಂಗಭೂಮಿಗೆ ಮೊರೆಹೊಕ್ಕ ಕಲಾವಿದೆಯರು ಅನ್ನಕ್ಕಾಗಿ, ಅಂದರೆ ಹೊಟ್ಟೆಪಾಡಿಗಾಗಿ ಎಂದೂ ಅನ್ಯಮಾರ್ಗವನ್ನು ಹುಡುಕಿಕೊಂಡವರಲ್ಲ. ಆದ್ದರಿಂದಲೇ ಅನ್ನ ಒದಗಿಸಿಕೊಟ್ಟ ರಂಗಭೂಮಿ ಇವರಿಗೆ ದೇವತೆಯಾಗಿ ಕಂಡಿದೆ. ಆದರೆ ವಯಸ್ಸಾದಂತೆಲ್ಲಾ ರಂಗಕಲಾವಿದೆಯರು ತಮ್ಮ ಬದುಕಿನ ನೋವನ್ನು ಮುಂದೆ ಸಾಗಿಸಲು ಹೆಣಗಾಡಿದ್ದಾರೆ.

ರಂಗಭೂಮಿಯಲ್ಲಿ ಈ ರೀತಿಯ ಅಭದ್ರತೆಯ ಬದುಕು ಕೇವಲ ರಂಗಕಲಾವಿದೆಯರದೇ ಮಾತ್ರವಲ್ಲ. ಕಂಪನಿ ನಡೆಸುವ ಮಾಲೀಕರದ್ದೂ ಒಂದು ರೀತಿ ಅತಂತ್ರ ಬದುಕೇ. ಅಭದ್ರತೆಯ ಭಾವವೇ. ಮಳವಳ್ಳಿ ಸುಂದರಮ್ಮನವರು ತಮ್ಮ ಆತ್ಮಕಥೆಯಲ್ಲಿ ಹೇಳುವಂತೆ ಅವರ ಕಂಪನಿ ಚಿತ್ರದುರ್ಗದಲ್ಲಿ ಕ್ಯಾಂಪ್ ನಷ್ಟವಾಗಿ ನಾಟಕದ ಸಾಮಾನುಗಳನ್ನೆಲ್ಲಾ ಮೈಸೂರಿಗೆ ವರ್ಗಾಯಿಸಿದರು. ಕೆಲವು ದಿನ ಕಂಪನಿ ನಿಂತಾಗ ಗತಿಕಾಣದೆ ಒಂದು ದಿನ ಕಂಪನಿಯ ಆಡಳಿತಗಾರರಾದ ನಂದಿ ಬಸಪ್ಪನವರನ್ನು ಕಂಡು ಮತ್ತೆ ಕಂಪನಿ ಆರಂಭಿಸಿರೆಂದು ವಿನಂತಿಸಿದಾಗ, ನಂದಿ ಬಸಪ್ಪನವರು ಹೇಳಿದ ಮಾತುಗಳು ಕಂಪನಿಯ ಆಡಳಿತಗಾರರೂ, ಮಾಲೀಕರೂ ಅಭದ್ರತೆಯಲ್ಲಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. “ನಂದಿ ಬಸಪ್ಪನವರು ಸ್ವಲ್ಪ ಮುನಿಸಿನಿಂದಲೇ, “ಹೋಗ್ರಯ್ಯಾ ಇದಕ್ಕೆ ಹಣ ಹಾಕುವ ಬದಲು ಇನ್ಯಾವ ವ್ಯಾಪಾರಕ್ಕಾದರೂ ಹಣ ಹಾಕಿದರೆ ಒಂದಕ್ಕೆ ಎರಡರಂತೆ ಲಾಭ ಬರುತ್ತದೆ. ಕೊನೆಗೆ ನಾನು ಬೀದಿಯಿಂದ ಸ್ವಲ್ಪ ಮರಳು ತಂದು ಜೇಬಿನಲ್ಲಿ ಹಾಕಿಕೊಂಡರೂ ಅದು ಸ್ವಲ್ಪ ಕಾಲಾ ನಂತರ ಮುತ್ತು, ಕೆಂಪು ವಜ್ರಗಳಾಗಿರುತ್ತವೆ. ಹಾಳು ಈ ನಾಟಕ ಕಂಪನಿಗೆ ಹತ್ತು ಹನ್ನೆರಡು ಸಾವಿರ ಹಣ ತೊಡಗಿಸಿದರೂ ಒಂದು ರೂಪಾಯಿ ಕೂಡ ಹಿಂತಿರುಗಿ ಬರಲಿಲ್ಲ. ಇಂತಹ ವ್ಯಾಪಾರವನ್ನು ನಾನು ಯಾಕಾದರೂ ಮಾಡಬೇಕು? ಜೊತೆಗೆ ನಿಮ್ಮನ್ನೆಲ್ಲಾ ಆಶ್ರಯ ಮಾಡಿ ಕಂಪನಿಯನ್ನು ನಡೆಸುವ ಗೀಳು ನನಗ್ಯಾತಕ್ಕೆ? ಎಂದು ಖಂಡತುಂಡವಾಗಿ ಉತ್ತರಿಸಿದರು,”[2] ಎಂಬುದನ್ನು ಮಳವಳ್ಳಿ ಸುಂದರಮ್ಮ ಸ್ಮರಿಸುತ್ತಾರೆ.

ಪ್ರತಿಯೊಬ್ಬ ರಂಗಕಲಾವಿದೆಯೂ ತಾನು ಚೆನ್ನಾಗಿ ದುಡಿಯುವಾಗ ತಮ್ಮ ಮುಂದಿನ ವೃದ್ಧಾಪ್ಯದ ಬದುಕಿಗೆ ಏನನ್ನೂ ಕೂಡಿಟ್ಟುಕೊಳ್ಳಲಿಲ್ಲವಲ್ಲ ಎಂದು ಕೊರಗಿದ್ದಾರೆ. ಮಳವಳ್ಳಿ ಸುಂದರಮ್ಮ ತಮ್ಮ ಕಂಪನಿ ಆದಾಯ ಗಳಿಸದೆ ಅವನತಿಯ ಹಾದಿ ಹಿಡಿದಾಗ “ದೀರ್ಘಕಾಲ ಕಲಾಸೇವೆ ಮಾಡಿದರೂ ಮುಪ್ಪಿನಲ್ಲಿ ಅವಲಂಬಿಸಲು ಏನನ್ನೂ ಕೂಡಿಟ್ಟುಕೊಳ್ಳಲಿಲ್ಲವಲ್ಲ

ಎಂಬ ಚಿಂತೆಯು ಆವರಿಸಿತು. ಕನ್ನಡ ನಾಡಿನ ಎಷ್ಟೋ ಮಂದಿ ಕಲಾವಿದರೂ, ಅಭಿನೇತ್ರಿಯರೂ, ಸಾಹಿತಿಗಳು, ಸಂಗೀತಗಾರರೂ ರಕ್ಷಣೆಯಿಲ್ಲದೆ ತತ್ತರಿಸಿರುವುದನ್ನು ಕಣ್ಣಾರೆ ಕಂಡಿದ್ದ ನಾನು ನನ್ನ ಭವಿಷ್ಯವನ್ನು ನೆನೆದು ನಡುಗಿದೆ"[3] ಎಂದು ಕೊರಗಿದ್ದಾರೆ. ಹೀಗೆ ರಂಗಕಲಾವಿದೆಯರು ಕಲೆ ಅಮರ, ಕಲಾವಿದ ನಶ್ವರವೆಂಬ ಸತ್ಯ ಮನಸ್ಸಿಗೆ ಗೋಚರವಾಗಿದ್ದರೂ ಕಲಾರಂಗದಲ್ಲಿ ಸೇವೆ ಮುಂದುವರಿಸಿದ್ದಾರೆ. ಆದರೆ ತಮ್ಮ ಮುಪ್ಪಿನಲ್ಲಿ ಆರ್ಥಿಕ ಸವಲತ್ತುಗಳಿಲ್ಲದೆ ಕೊರಗಿದ್ದಾರೆಂಬುದಕ್ಕೆ ಹಿರಿಯ ಕಲಾವಿದೆ ಮಳವಳ್ಳಿ ಸುಂದರಮ್ಮನವರ ಈ ಮಾತು ಸಾಕ್ಷಿಯಾಗಿದೆ. "ಎಷ್ಟೋ ಸಂಘ–ಸಂಸ್ಥೆಗಳು ನನ್ನನ್ನು ಆಹ್ವಾನಿಸಿ ಸನ್ಮಾನಿಸಿದವು. ಆದರೆ ನನ್ನಂತಹ ಇಳಿ ವಯಸ್ಸಿನ ಕಲಾವಿದರು ಸನ್ಮಾನ ಸಮಾರಂಭಗಳಿಂದ ಜೀವ ಹಿಡಿದು ನಿಲ್ಲಲು ಸಾಧ್ಯವಿಲ್ಲವಷ್ಟೇ? ನನ್ನ ವೃದ್ಧಾಪ್ಯದ ಬದುಕಿಗೆ ಭದ್ರತೆ, ರಕ್ಷಣೆ ಬರದಿದ್ದರಿಂದ ದಿನೇ ದಿನೇ ನನ್ನ ಪರಿಸ್ಥಿತಿ ಶೋಚನೀಯವಾಗತೊಡಗಿತು. ಕನ್ನಡ ನಾಡಿನಲ್ಲಿ ರಂಗಭೂಮಿಗಾಗಿ ಇಡೀ ಜೀವಿತವನ್ನು ಮೀಸಲಾಗಿಟ್ಟು ವಯೋಧರ್ಮದಂತೆ ರಂಗದಿಂದ ನಿವೃತ್ತರಾದಾಗ ಕಲಾವಿದರು ಹೇಗೆ ಬಾಳಬೇಕು? ಎಂಬ ಪ್ರಶ್ನೆಯ ಬೃಹತ್ತತೆ ಅರ್ಥವಾಯಿತು"[4] ಎನ್ನುತ್ತಾರೆ.

ರಂಗಕಲಾವಿದರನ್ನು ದೇಹದಲ್ಲಿ ಶಕ್ತಿ, ಕಸುವು ಇರುವವರೆಗೂ, ಯೌವ್ವನ ಇರುವವರೆಗೂ, ಕಂಪನಿಗಳು ದುಡಿಸಿಕೊಳ್ಳುತ್ತವೆ. ಪ್ರೇಕ್ಷಕರು ಅಷ್ಟೇ ರಂಗಕಲಾವಿದೆಯರು ರಂಗದ ಮೇಲಿರುವಷ್ಟು ದಿನ ಗೌರವದಿಂದ ಅಭಿಮಾನದಿಂದ ಕಾಣುತ್ತಾರೆ. ನಾಟಕದಲ್ಲಿನ ರಂಗಕಲಾವಿದೆಯರ ಉದ್ಯೋಗವೇನೂ ಸರ್ಕಾರಿ ಉದ್ಯೋಗವಲ್ಲ. ಪರಿಸ್ಥಿತಿ ಹೀಗಿದ್ದೂ ರಂಗಕಲಾವಿದೆಯರು ತಮ್ಮ ಇಡೀ ಜೀವನವನ್ನು ರಂಗಭೂಮಿಗೆ ಮೀಸಲಿಟ್ಟು ವಯೋಧರ್ಮದಿಂದ ರಂಗಭೂಮಿಯಿಂದ ನಿವೃತ್ತರಾದಾಗ ಹೇಗೆ ಜೀವನ ಮಾಡಬೇಕೆಂಬುದನ್ನು ವ್ಯವಸ್ಥೆ, ರಂಗಾಸಕ್ತರು, ಪ್ರೇಕ್ಷಕರು, ಕಲಾಭಿಮಾನಿಗಳು ಯೋಚಿಸಬೇಕು. ನಮ್ಮ ನಾಡಿನಲ್ಲಿ ರಂಗಕಲಾವಿದೆಯರಿಗೆ, ಸಾಹಿತಿಗಳಿಗೆ, ಸಂಗೀತಗಾರರಿಗೆ, ಸರ್ಕಾರ ಮತ್ತು ಸಾರ್ವಜನಿಕರು ರಕ್ಷಣೆ ನೀಡಲು ಮುಂದಾಗಬೇಕು. ಈ ನಿಟ್ಟಿನಲ್ಲಿ ಸುಮಾರು ನಲವತ್ತು ವರ್ಷಗಳ ಕಾಲ ನಾಟಕ ರಂಗದಲ್ಲಿ ನಿಂತು ಕಲಾಮಾತೆಯ ಸೇವೆ ಮಾಡಿದರೂ ಮುಪ್ಪಿನಲ್ಲಿ ಆಸರೆಯಾಗುವಂತೆ ಏನನ್ನೂ ಕೂಡಿಟ್ಟುಕೊಳ್ಳಲಾಗಲಿಲ್ಲವಲ್ಲ ಎಂಬ ಚಿಂತೆಗೆ ರಂಗಕಲಾವಿದೆಯರು ಸಿಲುಕಿದ್ದಾರೆ.

ನಟಿ ಕಲ್ಪನಾ ಚಲನಚಿತ್ರ ರಂಗದಲ್ಲಿ ಅವಕಾಶಗಳನ್ನು ಕಳೆದುಕೊಂಡು ಅಲ್ಲಿ ಉಂಟಾದ ಸೋಲುಗಳಿಂದ ಕಂಗೆಟ್ಟು, ಸಾಲ ತೀರಿಸುವುದಕ್ಕೋಸ್ಕರವೇ, ಮತ್ತು ತಮ್ಮನ್ನನ್ನು ಓದಿಸುವ ಆಸೆಯೊಂದಿಗೆ ಉತ್ತರ ಕರ್ನಾಟಕದ ತುತ್ತ ತುದಿಯಲ್ಲಿರುವ ಸಂಕೇಶ್ವರವೆಂಬ ಊರಲ್ಲಿ ಗುಡಿಗೇರಿ ಬಸವರಾಜನ ನಾಟಕ ಕಂಪನಿಯನ್ನು ಸೇರಿದ್ದು, ತನ್ನ ಬದುಕಿನಲ್ಲಿ ಕಾಡಿದ್ದ ಅನೇಕ ಅಭದ್ರತೆಗಳಿಂದಲೇ. ಆದರೆ ಅಲ್ಲಿಯೂ ಆಕೆಗೆ ತನ್ನ ಬದುಕಿನಲ್ಲಿ ಅನೇಕ ಅಭದ್ರತೆಗಳು ಕಾಡಿವೆ. ಆದ್ದರಿಂದಲೇ ಸಂಕೇಶ್ವರದ ಬಳಿಯ ಗೋಟೂರಿನ ಇನ್ ಸ್ಪೆಕ್ಷನ್ ಬಂಗಲೆಯಲ್ಲಿ ವಜ್ರ ನುಂಗಿ ಆತ್ಮಹತ್ಯೆಗೆ ಶರಣಾದಳು. ಇಲ್ಲಿ ಆಕೆಯ ಆತ್ಮಹತ್ಯೆಗೆ ಕಾರಣವಾದದ್ದು ಆರ್ಥಿಕ ಅಭದ್ರತೆಯೋ? ಅಥವಾ ತನ್ನನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಳ್ಳುವ ಸಂಗಾತಿ ಸಿಗಲಿಲ್ಲ ಎಂಬ ಅಭದ್ರತೆಯಿಂದಲೋ ಎಂಬುದನ್ನು ಯೋಚಿಸಬೇಕು. ಆತ್ಮಕಥೆಯನ್ನು ಓದಿದಾಗ ಅನ್ನಿಸುತ್ತದೆ, ಕಲ್ಪನಾ ಯಾರನ್ನು ಪ್ರೀತಿಸಿದಳೋ ಅವರು ನಟಿ ಕಲ್ಪನಾಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಲಿಲ್ಲವೆನಿಸುತ್ತದೆ. ನಟಿ ಕಲ್ಪನಾಳ ಆತ್ಮಕಥೆಯಲ್ಲಿ ದಾಖಲಿಸಿರುವ ವಿವರಗಳಂತೆ ಕಲ್ಪನಾಳ ಬದುಕಿನಲ್ಲಿ ಬಂದು ಹೋದ ಪ್ರತಿ

ಪುರುಷನಿಗೂ ಈಗಾಗಲೆ ವಿವಾಹವಾಗಿತ್ತು. "ಅದರಂತೆಯೇ ಕಲ್ಪನಾ ಜೀವನದುದ್ದಕ್ಕೂ ವಿವಾಹಿತರ ಬದುಕಿನ 'ಮೂರನೆಯವಳಾಗಿಯೇ' ಸಲ್ಲುತ್ತಾ ಹೋದಳು."[5] ಕಲ್ಪನಾಳಿಗೆ ತನ್ನನ್ನು ತನ್ನಷ್ಟೇ ನಿಜವಾಗಿಯೂ ಪ್ರೀತಿಸುವ ಸಂಗಾತಿಸಿಗದೇ ಹೋದದ್ದೇ ಇದಕ್ಕೆ ಕಾರಣವಾಗಿರಬಹುದು. ಅದಕ್ಕೂ ಮೀರಿ ಈ ವಿಷಯದಲ್ಲಿ ನಟಿ ಕಲ್ಪನಾಳನ್ನು ಕಾಡಿದ ಅಭದ್ರತೆಗಳಾವುವು ಎಂದು ಯೋಚಿಸಬೇಕು.

ರಂಗಕಲಾವಿದೆ ಅನ್ನಪೂರ್ಣ ಸಾಗರ ತಮ್ಮ ಬದುಕಿನಲ್ಲಿ ತಮಗೆ ಎರಗಿದ್ದ ಕಷ್ಟ ನಷ್ಟಗಳನ್ನು ಅವುಗಳನ್ನು ದಾಟಿದ ಬಗೆಯನ್ನು ತಮ್ಮ ಆತ್ಮಕಥೆಯಲ್ಲಿ ಹೀಗೆ ದಾಖಲಿಸುತ್ತಾರೆ. "ದೀರ್ಘಕಾಲದ ಬದುಕಿನಲ್ಲಿ ಕಳೆದ ಉಪವಾಸ– ವನವಾಸಗಳೆಷ್ಟೋ, ಜಾಗರಣೆಯ ದಿನಗಳೆಷ್ಟೋ. ತುಳಿದ ಕಲ್ಲು ಮುಳ್ಳುಗಳೆಷ್ಟೋ. ಅನುಭವಿಸಿದ ಹಿಂಸೆಗಳೆಷ್ಟೋ. ಈಗ ಅವೆಲ್ಲಾ ಸತ್ತುಹೋಗಿವೆ. ಸತ್ತು ಹೋಗಿದೆ ಎಂದರೂ ಆಗಾಗ್ಗೆ ಜೀವತಾಳಿ ಕಾಡ್ತಿವೆ; ನಾನು ಹರೆಯದಲ್ಲಿ ಪ್ರೀತಿಸಿದ್ದು ಮುಳ್ಳುಗಳನ್ನು. ಮುಳ್ಳುಗಳಲ್ಲಿಯೇ ಅರಳಿದ್ದ ಹೂವಿನ ಪಕಳೆಗಳನ್ನು ಕಂಡು ಮೋಹಿಸಿದ್ದೆ. ನನಗೆ ದೊರೆತಿದ್ದು, ಅರಳಿದ ಹೂವಲ್ಲ. ಅದರ ಪರಿಮಳವೂ ಅಲ್ಲ. ಮುಳ್ಳುಗಳು, ಬರೀ ಮುಳ್ಳುಗಳು. ಅವು ಗಾಯ ಮಾಡಿ ಹೋದವು. ಗಾಯದ ಗುರುತುಗಳಿವೆ"[6] ಎಂದು ಅವರು ಹೇಳುವ ಮಾತುಗಳು ಅವರು ತಮ್ಮ ವೈಯಕ್ತಿಕ ಬದುಕಿನಲ್ಲಿ, ರಂಗದ ಬದುಕಿನಲ್ಲಿ ದಾಟಿ ಬಂದ ಅಗ್ನಿ ದಿವ್ಯಗಳೇನು ಎಂಬುದನ್ನು ಸೂಚ್ಯವಾಗಿ ಸೂಚಿಸುತ್ತವೆ.

ಅನ್ನಪೂರ್ಣ ಸಾಗರ ಕಲಾವಿದೆಗೆ ಮನೆಯಲ್ಲಿ ಮೂರು ತಂಗಿಯರ ಜವಾಬ್ದಾರಿ ಇತ್ತು. ಅವರ ತಂದೆ ತಾಯಂದಿರ ದುಡಿಮೆ ಕಡಿಮೆ ಇತ್ತು. ಇವರ ಮತ್ತು ಇವರ ತಂಗಿ ಲೀಲಾ ಆಕೆಯೂ ಕಲಾವಿದೆ. ಇವರ ದುಡಿಮೆಯೇ ಕುಟುಂಬಕ್ಕೆ ಮೂಲವಾಗಿತ್ತು. ಇವರ ತಂಗಿ ಲೀಲಾ ಸುಳ್ಯದ ನಾಟಕ ಕಂಪನಿಯಲ್ಲಿದ್ದರು. ಇವರ ತಂದೆಯೂ ಕೂಡ ಅದೇ ಕಂಪನಿಯಲ್ಲಿ ಗೇಟ್ ಕೀಪರ್ ಆಗಿ ಕೆಲಸ ಮಾಡುತ್ತಿದ್ದರು. ಹುಬ್ಬಳ್ಳಿಯಲ್ಲಿ ಇವರು ನೆಲೆ ನಿಂತಾಗ ಎಲ್ಲರೂ ಇವರ ಮದುವೆ ಬಗ್ಗೆ ಪ್ರಶ್ನಿಸಿದರು. "ನನಗೆ ನನ್ನದೇ ಆದ ಜವಾಬ್ದಾರಿಗಳಿದ್ದವು. ಅವುಗಳಿಗಾಗಿ ನಾನು ನನ್ನ ಮದುವೆ ಮುಂದೂಡುತ್ತಲೇ ಬಂದಿದ್ದೆ. ಆದರೂ ನನಗೂ ಆಗಾಗ ಒಂದು ಜೋಡಿ ಬೇಕೆನಿಸುತ್ತಿತ್ತು. ನನ್ನನ್ನು ಅರ್ಥ ಮಾಡಿಕೊಂಡು ನನ್ನ ಸ್ಥಿತಿ–ಗತಿ ತಿಳಿದುಕೊಂಡು, ಹೊಂದಿಕೊಂಡು ಹೋಗುವ ಗಂಡು ಸಿಗಬೇಕಲ್ಲಾ? ರಂಗಭೂಮಿಯ ನಟರ ಸಂಸಾರಗಳನ್ನು; ಮೂರು ಮೂರು ದಿನಗಳಲ್ಲಿ ಮುರಿದು ಬೀಳುವುದನ್ನು ನೋಡಿದ್ದೆ."[7] ರಂಗಕಲಾವಿದೆ ಅನ್ನಪೂರ್ಣ ಸಾಗರರು, ತಮ್ಮ ತಂದೆ ತೀರಿಕೊಂಡಾಗಲೂ ಅವರ ಅಂತಿಮದರ್ಶನಕ್ಕೆ ಹೋಗಲು ಅವರ ಬಳಿ ಹಣವಿರಲಿಲ್ಲ. ಆಗ ಮತ್ತೊಬ್ಬ ರಂಗನಟಿ ತೆರೆಸಮ್ಮನವರಲ್ಲಿ ನೂರು ರೂಗಳನ್ನು ಪಡೆದು ತಮ್ಮ ತಂದೆಯ ಅಂತ್ಯಕ್ರಿಯೆಗೆ ಹೋದದ್ದನ್ನು ಸ್ಮರಿಸಿದ್ದಾರೆ. ಅಂದರೆ ರಂಗಕಲಾವಿದೆಯರು ಅಂತಹ ಆರ್ಥಿಕ ಅಭದ್ರತೆಯಲ್ಲಿಯೇ ದಿನಗಳನ್ನು ನೂಕುತ್ತಿರುತ್ತಾರೆ.

ಮೈಸೂರಿನಲ್ಲಿ ನೆಲೆಸಿದ ಮಾಲತಿ ಮೈಸೂರು ರಂಗಭೂಮಿಯ ಸೇವೆಯನ್ನು ಬಿಟ್ಟ ನಂತರ ಧಾರಾವಾಹಿಯನ್ನು ಅರಸಿದರು. ಆದರೆ ಧಾರಾವಾಹಿಗೆ ಶೂಟಿಂಗ್ ಗಾಗಿ ಬೆಂಗಳೂರಿಗೆ ಬೆಳಿಗ್ಗೆ ಏಳು ಗಂಟೆಗೆ ತಲುಪಬೇಕಿತ್ತು. ಟಿ.ವಿ. ಧಾರಾವಾಹಿಗಳನ್ನೇ ಸಂಪೂರ್ಣ ನೆಚ್ಚಿಕೊಳ್ಳಬೇಕಾದರೆ ಅವರು ಬೆಂಗಳೂರಿನಲ್ಲಿ ಬಂದು ನೆಲಸುವುದು ಅನಿವಾರ್ಯವಾಗಿತ್ತು. ಆದರೆ ಗೋಕಾಕದಲ್ಲಿ ಒಂದು ಪುಟ್ಟ ಮನೆಯನ್ನು ಬಿಟ್ಟರೆ ಅವರಿಗೆ ಉಳಿದಂತೆ ಬರಿಗೈ ಆಗಿತ್ತು. ಬೆಂಗಳೂರಿನಲ್ಲಿ ಮನೆ ಬಾಡಿಗೆ ತೆಗೆದುಕೊಂಡು ಬದುಕುವುದು ಅವರಿಗೆ ದುಸ್ತರವಾಗಿತ್ತು. ಬೆಂಗಳೂರಿನಲ್ಲಿ ಭೋಗ್ಯಕ್ಕೆ ಮನೆ ಮಾಡಬೇಕೆಂದರೆ ಅಂದಿನ ಕಾಲಕ್ಕೆ ಲಕ್ಷ

ರೂಗಳಿಗೂ ಹೆಚ್ಚು ಬೇಕಾಗಿತ್ತು. ಅಷ್ಟು ಹಣವನ್ನು ಎಲ್ಲಿಂದ ತರುವುದು? ಹೇಗೂ ಸಾಲ ತಂದರೆ ಮನೆಭೋಗ್ಯ ಹಿಡಿಯಬಹುದು. ಆದರೆ ಧಾರಾವಾಹಿಗಳ ಅವಕಾಶ ನಿರಂತರವಾಗಿ ಸಿಗದಿದ್ದರೆ ಮುಂದೇನು? ಎಂಬ ಪ್ರಶ್ನೆ ಅವರಿಗೆ ಕಾಡಿತು. ಧಾರಾವಾಹಿಗಳಲ್ಲಿ ಸಿಗುವ ಅವಕಾಶ ಅನಿಶ್ಚಿತವಾದ್ದರಿಂದ ಬಾಡಿಗೆ ಮನೆ ಮಾಡಲಿಲ್ಲ. ‘‘ಶೂಟಿಂಗ್ ಒಮ್ಮೊಮ್ಮೆ ಸತತ 4–5 ದಿನ ಅಥವಾ 5–6 ದಿನ ಬರುತ್ತಿದ್ದವು. ಹಾಗೆ ಒಟ್ಟಿಗೆ ಬಂದಾಗಲಾದರೂ ಬೆಂಗಳೂರಿನಲ್ಲಿ ಉಳಿಯಲು ರಾಜಾಜಿನಗರ ಪೇಯಿಂಗ್ ಗೆಸ್ಟ್ ಒಂದರಲ್ಲಿ ದಿನಕ್ಕೆ 60 ರೂ ನಂತೆ ಗೊತ್ತು ಮಾಡಿಕೊಂಡೆ’’.[8] ಎಂದು ಮಾಲತಿ ಮೈಸೂರು ರಂಗಭೂಮಿಯ ನೇಪಥ್ಯದ ತಮ್ಮ ಬದುಕನ್ನು ದಾಖಲಿಸುತ್ತಾರೆ. ಹೀಗೆ ಧಾರಾವಾಹಿಗಳಲ್ಲಿ ನಟಿಸಿದರೂ ಅವರಿಗೆ ಅದರಿಂದ ದೊರೆಯುತ್ತಿದ್ದ ಹಣ ಹೊಟ್ಟೆ ಬಟ್ಟೆಗೆ ಮಾತ್ರ ನೆರವಾಗುತ್ತಿತ್ತು. ಧಾರಾವಾಹಿಗಳಲ್ಲಿ ನಟಿಸಿದರೂ ಇವರಿಗೆ ರಂಗಭೂಮಿಯ ತಹತಹ ನಿಲ್ಲಲಿಲ್ಲ.

ರಂಗಭೂಮಿ ಕಲಾವಿದೆಯರಿಗೆ ಕಾಡಿದ ಅಭದ್ರತೆ ಬಗ್ಗೆ ರಂಗಕಲಾವಿದೆ ಜಿ.ಎನ್. ಅಂಜಲಿದೇವಿಯವರ ಕುರಿತ ವಾಣಿಶ್ರೀ ಎಸ್.ಪಾಟೀಲ್ ನಿರೂಪಿಸಿರುವ ತಮ್ಮ ಕೃತಿಯಲ್ಲಿ ಹೇಳಿರುವ ಮಾತುಗಳು ರಂಗಕಲಾವಿದೆಯರಿಗೆ ಕಾಡಿದ ಅಭದ್ರತೆ ಬಗ್ಗೆ ದಿಕ್ಸೂಚಿಯಂತಿವೆ. ‘‘ನನ್ನಂತೆ ನನ್ನ ಮಗಳು ಹುಟ್ಟು ಕಲಾವಿದೆ. ಐದು ರೂಪಾಯಿ ಸಂಬಳದಿಂದ ಈ ರಂಗದಾಗ ದುಡಿದೀವಿ. ಆದರೂ ಏನೊಂದೂ ಸಿಗಲಿಲ್ಲ. ಇರಲಿಕ್ಕೊಂದು ಸ್ವಂತ ಸೂರಿಲ್ಲ.’’[9] ಕಂಪನಿಯಿಂದ ಮತ್ತೊಂದು ಕಂಪನಿಗೆ ಎಂಬಂತೆ ಅಲೆದು ಅಭದ್ರತೆ ಕಾಡಿ ವೃತ್ತಿ ಕಂಪನಿಯ ಸಹವಾಸವೇ ಸಾಕೆನಿಸಿ ಅವರಿಗೆ ಒಂದೆಡೆ ನೆಲೆ ನಿಲ್ಲಬೇಕೆನಿಸಿತು. ಗಂಡ–ಹೆಂಡತಿ ಜೀವ ತೇಯ್ದು ಅಭಿನಯಿಸಿದ್ದು ಬರೀ ಹೊಟ್ಟೀ ಬಟ್ಟಿಗಾಯ್ತು. ಹೀಗೆ ಊರೂರು ಅಲೆಯುವಲ್ಲಿ ಇದ್ದೊಬ್ಬ ಮಗಳ ಶಿಕ್ಷಣವೂ ಪೂರ್ತಿಯಾಗಲಿಲ್ಲ. ಎನ್ನುತ್ತಾರೆ ವಾಣಿಶ್ರೀ ಎಸ್.ಪಾಟೀಲ. ಸಾರ್ಥಕ ಕಲೆಯ ಬದುಕೆಂದು ರಂಗಭೂಮಿಯಲ್ಲಿ ಅಭಿನಯಿಸಿ ಸಾಕಷ್ಟು ಹೆಸರು ಮಾಡಿದರೂ ಕಲೆಯ ಹೆಸರಿನಿಂದ ಹಸಿವೆ ನೀಗದೆಂಬ ಸತ್ಯ ಅರಿವಾದಾಗ ರಂಗಕಲಾವಿದೆಯರು ಆತಂಕಕ್ಕೆ ಒಳಗಾಗಿದ್ದಾರೆ. ವೃತ್ತಿ ನಾಟಕ ಕಂಪನಿಯಲ್ಲಿ ಹೆಚ್ಚು ಹಣ ಸಂಪಾದನೆಯಾಗದ ಕಾರಣ ಜಿ.ಎನ್.ಅಂಜಲಿದೇವಿಯಂತಹ ರಂಗಕಲಾವಿದೆಯರು ಹವ್ಯಾಸೀ ರಂಗಭೂಮಿಯಲ್ಲಿ ತಮ್ಮ ಅಸ್ತಿತ್ವವನ್ನರಸಿ ಹೊರಟಿದ್ದಾರೆ. ವೃತ್ತಿ ಸಂಸ್ಥೆಗಳಿಗಿಂತಲೂ ಹವ್ಯಾಸೀ ಸಂಸ್ಥೆಗಳಲ್ಲಿ ನಟಿಸಿ ತಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸಿಕೊಂಡಿದ್ದಾರೆ. ಮುಂದೆ ವೃತ್ತಿ ಸಂಸ್ಥೆಯ ನಾಟಕಗಳಿಗಿಂತಲೂ ಹವ್ಯಾಸೀ ನಾಟಕಗಳಿಗೆ ಜಿ.ಎನ್.ಅಂಜಲಿದೇವಿಯಂತಹ ರಂಗಕಲಾವಿದೆಯರು ಖಾಯಂ ನಟಿಯರಾದರು.

ರಂಗಕಲಾವಿದೆ ರಹಿಮಾನವ್ವ ಕಲ್ಮನಿ ತಮ್ಮ ಜೀವನದುದ್ದಕ್ಕೂ ರಂಗಸೇವೆ ಮಾಡಿದವರು. ಈ ಮಾತು ರಂಗಕಲಾವಿದೆಯರ ಪುನರ್ವಸತಿಗೆ ವ್ಯವಸ್ಥೆ ಮತ್ತು ಸಮುದಾಯ ಪ್ರಾಮಾಣಿಕವಾಗಿ ಯೋಚಿಸುವ ಅಗತ್ಯವನ್ನು ಹೇಳುತ್ತದೆ. ವೃದ್ಧಾಪ್ಯದಲ್ಲೂ ಈ ಕಲಾವಿದೆ ಬಣ್ಣ ಹಚ್ಚುವುದನ್ನು ಬಿಟ್ಟಿರಲಿಲ್ಲ. ‘‘ಬಣ್ಣ ಹಚ್ಚಿದ್ರ ಮಾತ್ರ ತುತ್ತು ಅನ್ನ ಉಂತೀವಿ, ಮಾಸಾಶನದ 1500 ರೂಪಾಯಿ ಗುಳಗಿ (ಔಷಧಿ)ಗೆ ಸಾಲೂದಿಲ್ಲ. ಬದುಕುವ ಸಲುವಾಗಿ ಬಣ್ಣ ಹಚ್ಚುವೆ. ಚಟಗಳಿಲ್ಲದ ಕಾರಣಕ್ಕೆ ಈಗಲೂ ಬಣ್ಣ ಹಚ್ಚಲು ಕರೆಯುತ್ತಾರೆ’’[10] ಎಂಬ ಮಾತುಗಳು ಅವರ ಶೋಚನೀಯ ಸ್ಥಿತಿಯನ್ನು ತಿಳಿಸುತ್ತದೆ.

ರಂಗಕಲಾವಿದೆಯರು ಯಾರೂ ಕೂಡ ಪ್ರಶಸ್ತಿಯ ಬೆನ್ನು ಹತ್ತಿ ಹೋದವರಲ್ಲ. ಸ್ವಾರ್ಥದ ಆಸೆಯಿಲ್ಲದೆ ತಮ್ಮನ್ನು ರಂಗಸೇವೆಗೆ ಅರ್ಪಿಸಿಕೊಂಡ ಅದೆಷ್ಟೋ ರಂಗಕಲಾವಿದೆಯರಿಗೆ ಸಲ್ಲಬೇಕಾದದ್ದು ಸಂದಿಲ್ಲವೆನಿಸುತ್ತದೆ. ಯಾಕೆಂದರೆ ಪ್ರತಿ

ರಂಗಕಲಾವಿದೆಯರ ನೇಪಥ್ಯದ ಬದುಕು ಅಸಹನೀಯವೇ. ಎಲ್ಲರೂ ಕಷ್ಟ ಸಹಿಷ್ಣುಗಳೇ. ಎಂಥ ಪರಿಸ್ಥಿತಿಯಲ್ಲೂ ಯಾರ ಬಳಿಯೂ ಕೈಚಾಚಿದವರರಲ್ಲ. ಬಣ್ಣಕ್ಕೂ ಬಡತನಕ್ಕೂ ಅವಿನಾಭಾವ ಸಂಬಂಧವಿದೆ ಎನ್ನಿಸುತ್ತದೆ. ರಂಗಕಲಾವಿದೆಯರ ಬದುಕನ್ನು ಗಮನಿಸಿದರೆ ಬಡತನದಿಂದಲೇ ಬದುಕನ್ನು ಸವೆಸಬೇಕೆಂದು ಅಲಿಖಿತ ನಿಯಮವಾಗಿದೆ ಏನೋ ಎನ್ನಿಸುತ್ತದೆ. ರಂಗಕಲೆಯ ಸರಸ್ವತಿಗೂ, ಹಣಕ್ಕೂ ಪರಸ್ಪರ ವಿರುದ್ಧ ದಿಕ್ಕಿನ ದ್ರುವಗಳೆನ್ನಿಸುತ್ತದೆ. ಕಲಾವಿದರ ಈ ನೇಪಥ್ಯದ ಬದುಕು ವ್ಯವಸ್ಥೆಗೆ ಕಲಾಪ್ರೇಮಿಗಳಿಗೆ ಕೇಳಿಲ್ಲವೇನೋ ಎನಿಸುತ್ತದೆ. ರಂಗಭೂಮಿಯಿಂದ ಹೆಚ್ಚು ಆರ್ಥಿಕ ಲಾಭವಿಲ್ಲವೆಂಬುದನ್ನು ಅರಿತಿದ್ದರೂ ಕಲೆಯನ್ನು ತಮ್ಮ ಪ್ರಾಣಕ್ಕಿಂತ ಹೆಚ್ಚು ಪ್ರೀತಿಸಿದವರು ಕಲಾವಿದರು. ರಂಗಕಲಾವಿದರ ಬದುಕು ಎಷ್ಟು ಅನಿಶ್ಚಿತ, ಅಭದ್ರತೆಯಿಂದ ಕೂಡಿರುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿ ಕುಕನೂರಿನ ರೆಹಮಾನವ್ವ ನಿಲ್ಲುತ್ತಾಳೆ. ದೇಹ ಸೌಂದರ್ಯವಿದ್ದಂತೆ ಜೀವನ ಸೌಂದರ್ಯ ರೆಹಮಾನವ್ವನ ಪಾಲಿಗೆ ಇರಲಿಲ್ಲ. ಒಂದು ಹಂತದಲ್ಲಿ ಎಂಟೆಂಟು ಕಾರುಗಳನ್ನು ಹೊಂದಿದ್ದ ರೆಹಮಾನವ್ವ ಮಕ್ಕಳು ಸತ್ತಾಗ ಊರಿಗೆ ಹೋಗಲು ಕನಿಷ್ಠ ಬಸ್ ಚಾರ್ಜೂ ಇಲ್ಲದೆ ಪಾತ್ರೆಗಳನ್ನು ಮಾರಿ ಹೆಣಗಳನ್ನು ನೋಡಲು ಹೋಗಬೇಕಾಯಿತೆಂದರೆ ದುರಂತತೆಯನ್ನು ಈ ಘಟನೆಯಿಂದ ಅಂದಾಜು ಮಾಡಬಹುದು.

ಇನ್ನು ಕಂಪನಿ ಮಾಲೀಕರಿಗೆ, ಕಲಾವಿದರಿಗೆ ಉಪಪತ್ನಿಯರಾಗಿಯೇ ಬಾಳಿದ ರಂಗಕಲಾವಿದೆಯರ ಬದುಕಿನ ಅಭದ್ರತೆ ಹೇಳತೀರದು. ಯಾವುದೇ ಕಲಾವಿದ ಕಂಪನಿಯನ್ನು ಬದಲಾಯಿಸಿದಷ್ಟೇ ಸುಲಭವಾಗಿ ಮಾಲೀಕರು ಕಲಾವಿದೆ ಪತ್ನಿಯರನ್ನೂ ಬದಲಾಯಿಸುತ್ತಾನೆ. ಅಂತಹ ಸಮಯದಲ್ಲಿ ಜೀವನ ಪೂರ್ತಿ ಮಾಲೀಕರಿಗೆ ಅಥವಾ ಕಲಾವಿದರಿಗೆ ಉಪಪತ್ನಿಯರಾಗಿಯೇ ಉಳಿದ ರಂಗಕಲಾವಿದೆಯರ ಪಾಡೇನು? ಇಂತಹ ಕಲಾವಿದೆಯರಿಗೆ ಹುಟ್ಟಿದ ಮಕ್ಕಳಿಗೆ ಸಾರ್ವಜನಿಕವಾಗಿ ತಂದೆಯ ಸ್ಥಾನವನ್ನು ನೀಡುವವರಾರು? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಸಾರ್ವಜನಿಕವಾಗಿ ತಂದೆಯ ಸ್ಥಾನವನ್ನು ತುಂಬದ ಸಂದರ್ಭಗಳಲ್ಲಿ ರಂಗಕಲಾವಿದೆಯರೇ ಆ ಮಕ್ಕಳನ್ನು ಕೈಹಿಡಿದು ಜವಾಬ್ದಾರಿಯಿಂದ ಸಾಕಬೇಕಾಗುತ್ತದೆ. ರಂಗಭೂಮಿಯ ಕಲಾವಿದೆಯರಿಗೆ ತಮ್ಮ ಬದುಕಿನಲ್ಲಿ ಅನೇಕ ಅಭದ್ರತೆಗಳು ಕಾಡಿದ್ದರಿಂದಲೇ ತಮ್ಮ ಮಕ್ಕಳು, ಮೊಮ್ಮಕ್ಕಳನ್ನು ಅವರು ರಂಗಭೂಮಿಗೆ ತರಲಿಲ್ಲ. ಕಲಾವಿದೆಯರ ಬದುಕು ನೀರಿನ ಮೇಲಿನ ಗುಳ್ಳೆಯಂತೆ ಎಂಬ ಸತ್ಯವನ್ನರಿತಿದ್ದ ರಂಗಕಲಾವಿದೆಯರು ತಮ್ಮ ಕಷ್ಟ ಕಾರ್ಪಣ್ಯ ತಮ್ಮ ಮಕ್ಕಳಿಗೆ ಬೇಡವೆನ್ನುತ್ತಾರೆ.

ರಂಗಕಲಾವಿದೆಯರು ಕಂಪನಿ ಮಾಲೀಕರನ್ನು ಮದುವೆ ಮಾಡಿಕೊಳ್ಳಲು ಅಥವಾ ಕಂಪನಿ ಮಾಲೀಕರಿಗೆ ಕೆಲವೊಮ್ಮೆ ಪತ್ನಿಯರಾಗಿ, ಉಪಪತ್ನಿಯರಾಗಿ ಬಾಳಿದ್ದಕ್ಕೂ ಕಾರಣಗಳನ್ನು ಹುಡುಕ ಬೇಕಿದೆ. ಅಲ್ಲದೆ ರಂಗಭೂಮಿಯ ಕಲಾವಿದೆಯರು ಅನೇಕ ಸಂದರ್ಭಗಳಲ್ಲಿ ಈಗಾಗಲೇ ವಿವಾಹಿತನಾಗಿದ್ದು ಮಕ್ಕಳನ್ನು ಹೊಂದಿದವರನ್ನೇ ಸಂಗಾತಿಗಳನ್ನಾಗಿ ಸ್ವೀಕರಿಸಿದ್ದಾರೆ. ಸಮಾಜ ಈಗಾಗಾಲೇ ರಂಗಭೂಮಿಯ ಕಲಾವಿದೆಯರನ್ನು, ಸಂಶಯದ, ಅನುಮಾನದ ದೃಷ್ಟಿಯಲ್ಲಿ ನೋಡುತ್ತಿರುವುದರಿಂದ ರಂಗಕಲಾವಿದೆಯರಿಗೆ ಸಂಗಾತಿಯ ಆಯ್ಕೆಗೆ ಹೆಚ್ಚು ಮುಕ್ತ ಅವಕಾಶಗಳಿರಲಿಲ್ಲ. ಹಾಗಾಗಿ ರಂಗಭೂಮಿಯ ಒಳಾವರಣದವರನ್ನು ಅಥವಾ ರಂಗಕಲೆಯ ಅಭೀಪ್ಸೆಗೆ ಅಡ್ಡಿಯುಂಟುಮಾಡದಿರುವವರನ್ನೇ ಸಂಗಾತಿಯಾಗಿ ಸ್ವೀಕರಿಸಬೇಕಾದ ಅನಿವಾರ್ಯತೆ ಅವರಿಗಿತ್ತು. ಅಲ್ಲದೆ ಹಿರಿಯ ತಲೆಮಾರಿನಲ್ಲಿ ಹೆಣ್ಣೊಬ್ಬಳು ಗಂಡಸಿನ ಆಸರೆಯಿಲ್ಲದೆ ಬದುಕುವುದು ಕಷ್ಟವಾದ್ದರಿಂದ ತಮ್ಮತಮಗೆ ಒಪ್ಪಿದಂತೆ ರಂಗಕಲಾವಿದೆಯರು ನಿಯತ್ತಿನ ವ್ಯಕ್ತಿಯನ್ನು ಆಯ್ಕೆ

ಮಾಡಿಕೊಂಡಿದ್ದಾರೆ.

ಶಾಂತಾ ಹುಬ್ಬಳ್ಳಿರ್, ಬೆಂಗಳೂರು ನಾಗರತ್ನಮ್ಮ, ನಟಿ ಕಲ್ಪನಾ ಮುಂತಾದ ಬಹುತೇಕ ಕಲಾವಿದೆಯರ ಬದುಕನ್ನು ಕಂಡರೆ ಅವುಗಳು ಒಂದು ವಿಚಿತ್ರವಾದ ದುರಂತಗಳಿಂದ ಅಂತ್ಯಗೊಂಡಿವೆ. ಈ ಎಲ್ಲಾ ರಂಗಕಲಾವಿದೆಯರ ಕಲೆ ಭಾಷೆ, ಪ್ರಾಂತ್ಯ, ಧರ್ಮಗಳ ಗಡಿರೆಗೆಗಳನ್ನು ದಾಟಿ ಮುಂದೆ ಸಾಗುತ್ತದೆ. ಆದರೆ ಈ ರಂಗಕಲಾವಿದೆಯರನ್ನು ನೋಡುವ ಸಮಾಜದ ದೃಷ್ಟಿಕೋನ ಮಾತ್ರ ಸಂಕುಚಿತತೆಯಿಂದ ಮುಕ್ತವಾಗುವುದಿಲ್ಲ. ರಂಗಕಲಾವಿದೆಯರು ಬದುಕಿದ್ದಾಗ ಸಮಾಜ ಗೌರವವನ್ನು, ಪ್ರೀತಿಯನ್ನು, ಆದರವನ್ನು ತೋರಿಸುವುದಕ್ಕೆ ಏನೇನೋ ಕಾರಣ ನೀಡಿ ಲೆಕ್ಕಾಚಾರ ಹಾಕುತ್ತದೆ. ಆದರೆ ಅವರನ್ನು ಸತ್ತ ಬಳಿಕ ಅದೇ ವ್ಯವಸ್ಥೆ ಕೆಲವೊಮ್ಮೆ ಮಹಾತ್ಮರನ್ನಾಗಿ ಮಾಡಲು ಪ್ರಯತ್ನಿಸುತ್ತದೆ. ರಂಗಕಲಾವಿದೆಯರ ಬದುಕಿನ ದುರಂತ ಅವರಿಗೆ ಮಾತ್ರ ದುರಂತವಲ್ಲ. ಅದೇನಿದ್ದರೂ ಸಮಾಜಕ್ಕೆ, ನಮಗೆ, ನಮ್ಮ ಸಂಸ್ಕೃತಿಗೆ, ಕಲೆಗೆ ಅದರ ದೊಡ್ಡ ಪೆಟ್ಟು ತಾಗುತ್ತದೆಯೆಂಬ ಎಚ್ಚರ ನಮಗಿರಬೇಕು.

ತಮ್ಮ ಬದುಕಿನಲ್ಲಿ ಕಾಡಿದ ಅಭದ್ರತೆಯ ಭಾವದ ಬಗ್ಗೆ ಒಬ್ಬೊಬ್ಬ ರಂಗಕಲಾವಿದೆಯರೂ ಒಂದೊಂದು ರೀತಿ ತಮ್ಮ ಆತ್ಮಕಥೆಗಳಲ್ಲಿ ಪ್ರಸ್ತಾಪಿಸಿದ್ದಾರೆ. ಕಲಾವಿದೆ ಮರಿಯಮ್ಮನಹಳ್ಳಿ ಕೆ.ನಾಗರತ್ನಮ್ಮ ಹೀಗೆ ತಮ್ಮ ನೋವುಗಳನ್ನು ದಾಖಲಿಸುತ್ತಾರೆ. ''ಸ್ವತಃ ದುಡಿಯುತ್ತೇವೆ ಎಂಬ ಘನತೆ, ಪಾತ್ರವನ್ನು ಚೆನ್ನಾಗಿ ಅಭಿನಯಿಸಿದಾಗ ಜನರಿಂದ ಸಿಗುವ ಮೆಚ್ಚುಗೆ, ನಮ್ಮ ವೈಯಕ್ತಿಕವಾದ ಎಲ್ಲಾ ನೋವುಗಳನ್ನು ಮರೆಯುವಂತೆ ಮಾಡುತ್ತಿತ್ತು. ಕೆದಕಿದರೆ ಮಡುಗಟ್ಟಿದ ನಮ್ಮ ನೋವುಗಳು ಬೂದಿ ಮುಚ್ಚಿದ ಕೆಂಡದಂತಿರುತ್ತವೆ.''[11] ತಮ್ಮ ಸುತ್ತಮುತ್ತಲಿನ ರಂಗಕಲಾವಿದೆಯರ ಜೀವನದ ಪರಿಹಾರ ಸಿಗದ ಸಮಸ್ಯೆಗಳನ್ನು, ಅವರ ಬದುಕಿನ ಗಾಳಿಪಟವನ್ನು ನೋಡಿ ನೋಡಿ ನಾನಂತೂ ಗಟ್ಟಿಯಾದೆ ಎನ್ನುತ್ತಾರೆ ಕೆ. ನಾಗರತ್ನಮ್ಮ. ಹೀಗೆ ಪರಿಹಾರ ಸಿಗದ ಸಮಸ್ಯೆಗಳ ನಡುವೆ ಬಾಳಿದ ರಂಗಕಲಾವಿದೆಯರ ಅಂತರಂಗದ ಶೂನ್ಯವನ್ನು ಸ್ವಲ್ಪಮಟ್ಟಿಗಾದರೂ ತುಂಬಿದ್ದು ಕಲಾಭಿಮಾನಿಗಳ ಪ್ರೀತಿಯ ಅತ್ಮೀಯತೆಯಿರಬೇಕು ಎನ್ನಿಸುತ್ತದೆ.

''ಕಲಾವಿದರ ಪಾಲಿಗೆ ಸುಖದ ಮಹಲೇನು ಸ್ವಾಗತಿಸಲಿಲ್ಲ. ಅವರಿಗೆ ಅವರದೇ ಆದ ನೋವುಗಳಿವೆ. ಆತ್ಮೀಯವಾಗಿ ಕಾಣುವ ಜನರ ಕೊರತೆಯಿದೆ. ಮಕ್ಕಳು ಮರಿ ಇದ್ದವರಿಗನೇಕರಿಗೆ ನಿಶ್ಚಿತ ನೆಲೆಯಿಲ್ಲ. ಆರ್ಥಿಕ ಭದ್ರತೆ ಇಲ್ಲ. ಸ್ಥಿರತೆ ಇಲ್ಲ. ಭವಿಷ್ಯವಿಲ್ಲ. ಆದರೂ ಅವರು ಹೆಸರಿಗಾಗಿ, ಘನತೆಗಾಗಿ, ಗೌರವಕ್ಕಾಗಿ ತಮ್ಮ ಸುಖವನ್ನೇ ಬಲಿಕೊಟ್ಟರು. ನೆನಸಿಕೊಂಡರೆ ನನಗೆ ದಿಗಿಭ್ರಮೆಯಾಗುತ್ತದೆ. ಪುರುಷರಿಗೆ ಸರಿಸಮಾನವಾಗಿ ಸಾರ್ವಜನಿಕ ಜೀವನದಲ್ಲಿ ತಲೆಯೆತ್ತಿ ನಿಲ್ಲುವ ಮಹಿಳೆಗೆ ಪುರುಷನ ತೋಳಿನ ಆಸರೆ ಇಲ್ಲ. ಸಂಗಾತಿತನ ಇಲ್ಲ. ಸ್ನೇಹಿತ ಇಲ್ಲ. ತನ್ನೊಂದಿಗೆ ಸಂಪೂರ್ಣ ಬದುಕನ್ನು ಹಂಚಿಕೊಳ್ಳುವ ವ್ಯಕ್ತಿ ಇಲ್ಲ. ನನ್ನ ವೃತ್ತಿ ಬಾಂಧವರನೇಕರ ತ್ಯಾಗ ಮನೋಭಾವವನ್ನು ನೆನಪಿಸಿಕೊಂಡರೆ ನನಗೆ ಈಗಲೂ ಅಚ್ಚರಿಯಾಗುತ್ತದೆ. ಕೀರ್ತಿಯೇ? ಜನರ ಮೆಚ್ಚುಗೆಯ ನುಡಿಗಳೇ? ಅಷ್ಟರಿಂದಲೇ ನಾವು ಬದುಕಿದೆವೆಯೇ?''[12] ಎನ್ನುತ್ತಾರೆ ಕೆ.ನಾಗರತ್ನಮ್ಮ. ರಂಗಭೂಮಿ ಕಲಾವಿದೆಯರ ಬದುಕಿನಲ್ಲಿ ಕಾಡಿದ ಅಭದ್ರತೆಯನ್ನು ಸೂತ್ರೀಕರಿಸುವ ಕೀಲಿಕೈಗಳಂತಿವೆ ಇವರ ಈ ಮೇಲಿನ ಮಾತುಗಳು. ಕಂಪನಿ ಕಲಾವಿದರು ಜೀವನಪೂರ್ತಿ ದುಡಿದು ತಮ್ಮ ಇಳಿಗಾಲದಲ್ಲಿ ನಿರ್ಗತಿಕರಾದವರೇ ಹೆಚ್ಚು ಮಂದಿ. ಇದ್ದುದರಲ್ಲಿಯೇ ತಮ್ಮ ಮುಂದಿನ ಭವಿಷ್ಯಕ್ಕೆ ಸರಿಯಾಗಿ ದಾರಿಮಾಡಿಕೊಂಡವರು ಕೆಲವೇ ಮಂದಿ. ಎಷ್ಟೇ ಪ್ರತಿಭಾವಂತ ಕಲಾವಿದೆಯರಾಗಿದ್ದರೂ

ವಯಸ್ಸಾದಂತೆ ಅವರಿಗೆ ಅವಕಾಶವಿರುವುದಿಲ್ಲ. ನಟಿಸುವ ಸಾಮರ್ಥ್ಯವಿದ್ದರೂ ವಯಸ್ಸಾದ ಕಾರಣಕ್ಕಾಗಿ ಯಾರೂ ಅವರನ್ನು ಕರೆಯುವುದಿಲ್ಲ. ಕಂಪನಿಯನ್ನು ತೊರೆದ ಮೇಲೆ ಸರಿಯಾಗಿ ಆಸರೆ ಸಿಗದೆ ತೀವ್ರ ಬಡತನದಲ್ಲೇ ಬದುಕುವ ಹಲವು ರಂಗಕಲಾವಿದರು ಇಂದಿಗೂ ನಮ್ಮ ನಡುವಿದ್ದಾರೆ. ವೃತ್ತಿ ನಾಟಕ ಕಂಪನಿಯನ್ನು ತೊರೆದ ಮೇಲೆ ಈ ಹಿಂದೆ ತಾವು ಅಭಿನಯಿಸಿದ ನಾಟಕಗಳ ಪಾತ್ರಗಳ ಹೆಸರಿನ ಖ್ಯಾತಿಯ ಆಧಾರದ ಮೇಲೆ ಬದುಕುವ ರಂಗಕಲಾವಿದೆಯರನ್ನು ಹಳ್ಳಿಗಾಡಿನ ಹವ್ಯಾಸಿ ತಂಡಗಳು ಆಗಾಗ್ಗೆ ಆಹ್ವಾನಿಸುವುದುಂಟು. ಈ ಬಗ್ಗೆ ಅನೇಕ ರಂಗಕಲಾವಿದೆಯರು ತಮ್ಮ ಆತ್ಮಕಥೆಗಳಲ್ಲಿ ದಾಖಲಿಸಿದ್ದಾರೆ.

“ಕಲಾವಿದೆಯಾಗಿ ಬೆಳೆದ ಕೀರ್ತಿಯ ತೆರೆಯ ಹಿಂದೆ ವೈಯಕ್ತಿಕ ಸುಖಕ್ಕೆ ಕೊಳ್ಳಿ ಇಟ್ಟುಕೊಳ್ಳಲೇ ಬೇಕು. ಯಾಕೆಂದರೆ ನಾವೇನೋ ಒಬ್ಬ ಪುರುಷ ಸಂಗಾತಿಗೆ ನಿಷ್ಠರಾಗಿರುತ್ತೇವೆ. ಆದರೆ ಗಂಡಸರ ನಿಷ್ಠೆ ಇಬ್ಬರು ಮೂವರಲ್ಲಿ ಹಂಚಿಹೋಗುತ್ತದೆ. ಪಾಲಿಗೆ ಬಂದದ್ದೇ ಪಂಚಾಮೃತ. ಸಿಕ್ಕಷ್ಟೇ ಸುಖವನ್ನು ಸ್ವೀಕರಿಸಬೇಕು. ನಮ್ಮ ಜವಾಬ್ದಾರಿ ಹೊರುವಂಥ ಆಶ್ರಿತ ವ್ಯಕ್ತಿಗಳು ನಮಗೆ ದೊರೆಯುವುದಿಲ್ಲ. ಆದ್ದರಿಂದ ನಾವು ಸದಾ ನಮ್ಮ ದುಡಿಮೆಯನ್ನೇ ನೆಚ್ಚಿಕೊಳ್ಳಬೇಕಾಗುತ್ತದೆ. ವರ್ಷದ ಹನ್ನೆರಡೂ ತಿಂಗಳು ನಮಗೆ ಸೀಜನ್ ಇರುವುದಿಲ್ಲ. ಸೀಜನ್ ಇಲ್ಲದ ದಿನಗಳಲ್ಲಿ ಕೃಷಿಕರ ಮನೆಯಾದರೆ ಕೃಷಿ ಕೆಲಸ, ಹೊಲಿಗೆ, ಪಶುಪಾಲನೆ, ಕೂಲಿ ಕೆಲಸ ಮಾಡಬೇಕಾಗುತ್ತದೆ. ಯಾಕೆಂದರೆ ನಾವು ನಮ್ಮನ್ನು ಸಾಕಿಕೊಂಡರೆ ಸಾಲದು. ನಮ್ಮ ಬಂಧು-ಬಳಗ ನಮ್ಮನ್ನು ಅವಲಂಬಿಸಿರುತ್ತದೆ. ಅದೂ ಹೋಗಲಿ, ಅದನ್ನೇನೋ ಭರಿಸೇವು. ಆದರೆ ನಮಗೆ ಆಸರೆ ನೀಡಬೇಕಾದ ಸಂಗಾತಿಗಳೇ ನಮ್ಮ ದುಡಿಮೆಯನ್ನು ಅವಲಂಬಿಸಿದ ಉದಾಹರಣೆಗಳು ಎಷ್ಟೋ ಇವೆ.”[13] ಎಂದಿದ್ದಾರೆ. ಅನೇಕ ಪ್ರತಿಭಾವಂತರು ರಂಗಭೂಮಿಯಲ್ಲಿದ್ದರೂ ಸತ್ತಾಗ ಶವಸಂಸ್ಕಾರಕ್ಕೆ ಹಣವಿಲ್ಲದ ಪರಿಸ್ಥಿತಿ ಎದುರಿಸಿದ್ದಾರೆ. ಅಪಾರ ಪ್ರತಿಭಾವಂತ ರಂಗಕಲಾವಿದರು ತಮ್ಮ ದುಡಿಮೆ ನಿಂತಾಗ ಅನ್ನಕ್ಕೂ ಪರದಾಡಿದ್ದಾರೆ. ಸರ್ಕಾರಿ ನೌಕರರಾದರೆ ಸೇವಾಮಧಿ ವಯಸ್ಸು, ಅನುಭವ ಹೆಚ್ಚಾದಂತೆ ವೇತನ ಹೆಚ್ಚಳ, ಬಡ್ತಿ, ಆರ್ಥಿಕ ಭದ್ರತೆ ಹೆಚ್ಚು ದೊರೆಯುತ್ತವೆ. ಆದರೆ ರಂಗಕಲಾವಿದೆಯರಿಗೆ ವಯಸ್ಸು ಹೆಚ್ಚಿದಂತೆ ಬೇಡಿಕೆ ಕಡಿಮೆಯಾಗುತ್ತ, ಸಂಭಾವನೆ ಕಡಿಮೆಯಾಗುತ್ತದೆ. ರಂಗಕಲಾವಿದೆಯರನ್ನು ಅವರ ಇಳಿಗಾಲದ ವಯಸ್ಸಿನಲ್ಲಿ ಅವರನ್ನು ಕಾಪಾಡುವ ಹೊಣೆಯಾರದು? ಸರ್ಕಾರವೇ? ಸಾರ್ವಜನಿಕರೆ? ಈ ಎಲ್ಲಾ ಉತ್ತರ ಸಿಗದ ಪ್ರಶ್ನೆಗಳು ಬೆಳೆಯುತ್ತಾ ಹೋಗುತ್ತವೆ. ಪ್ರತಿಭೆ ಇದ್ದೂ ಅವಕಾಶ ಇಲ್ಲದೆ, ದುಡಿಯುವ ವಯಸ್ಸಿನಲ್ಲೂ ಅವಕಾಶ ಸಿಗದೆ ಬಡತನದಲ್ಲೇ ನರಳಿದ ಕಲಾವಿದರಿಗೇನೂ ರಂಗಭೂಮಿಯಲ್ಲಿ ಕೊರತೆಯಿಲ್ಲ.

ರಂಗಕಲಾವಿದೆ ಬಿ.ಜಯಶ್ರೀ ತಮ್ಮ ಬದುಕಿನಲ್ಲಿ ಅನುಭವಿಸಿದ ಆರ್ಥಿಕ ಅಭದ್ರತೆ ಬಗ್ಗೆ ತಮ್ಮ ಕೃತಿಯಲ್ಲಿ ಹೀಗೆ ದಾಖಲಿಸುತ್ತಾರೆ. ಇವರ ಅಮ್ಮ ಕಲಾವಿದೆ ಮಾಲತಮ್ಮನವರ ಅನಾರೋಗ್ಯದಿಂದ ಆಸ್ಪತ್ರೆಗೆ ಪದೇ ಪದೇ ಹೆಚ್ಚು ಖರ್ಚು ಮಾಡಬೇಕಾದ ಸಂದರ್ಭ ಬರುತ್ತಿತ್ತು. “ಆಸ್ಪತ್ರೆಯ ಖರ್ಚನ್ನು ಪದೇ ಪದೇ ನಿಭಾಯಿಸುವಷ್ಟು ಶಕ್ತಿಯನ್ನು ದೇವರು ನನಗೆ ಕೊಟ್ಟಿರಲಿಲ್ಲ. ನಾವು ಕಲಾವಿದರು ಒಂದು ಅರ್ಥದಲ್ಲಿ ಅದೃಷ್ಟವಂತರು. ಹೋದರೆ ಜನ ಗುರುತಿಸುತ್ತಾರೆ, ಗೌರವ ಕೊಡುತ್ತಾರೆ, ನಮ್ಮ ಬಗ್ಗೆ ಎಷ್ಟು ಹೆಮ್ಮೆ ಇದೆ ಅನ್ನೋದನ್ನ ಹೇಳಿಕೊಳ್ತಾರೆ. ಇದಕ್ಕೆಲ್ಲಾ ಜನ್ಮಾಂತರದ ಋಣ ಇರಬೇಕು ಅನ್ನುವ ಮಾತು ಬಹಳ ಸತ್ಯ. ಆದರೆ, ನಮ್ಮ ಹೊಟ್ಟೆಪಾಡಿನ ವಿಚಾರ ಬಂದಾಗ, ನಮ್ಮ ಜೀವನದ ಪ್ರಶ್ನೆ ಬಂದಾಗ ಹೊರಗಿನ ನಾವು ಬೇರೆ ಒಳಗಿನ ನಾವು ಬೇರೆ. ಎಲ್ಲರಿಗೂ ಇರುವಂತೆ ನಮಗೂ ಖರ್ಚುಗಳಿರುತ್ತವೆ”[14] ಕಲೆಯೊಂದೇ ದುಡಿಮೆಗೆ ದಾರಿಯಾಗಿರುವಾಗ ಅದು ನಿಗದಿತ ನಿಶ್ಚಿತ ಆದಾಯ ಇಷ್ಟೇ

ಎಂಬುದು ಇಲ್ಲದಿರುವಾಗ ರಂಗಕಲಾವಿದೆಯರು ಆರ್ಥಿಕ ಅಭದ್ರತೆಯನ್ನು ಬದುಕಿನುದ್ದಕ್ಕೂ ಅನುಭವಿಸಿದ್ದಾರೆ. ಅಲ್ಲದೇ ಈ ರಂಗಕಲಾವಿದೆಯರು ತಾವೊಬ್ಬರೇ ದುಡಿದು ಮನೆಯ ಕುಟುಂಬದ ಸದಸ್ಯರ ಖರ್ಚು ವೆಚ್ಚಗಳನ್ನು ನಿಭಾಯಿಸಬೇಕಾಗಿತ್ತು. ಸಾಲ ಮಾಡುವುದಾದರೆ ತಮ್ಮಂತಹ ಇತರೆ ಸಹಕಲಾವಿದರೊಂದಿಗೆ ಸಾಲ ಮಾಡಬೇಕಾಗಿತ್ತು. ಅಲ್ಲದೆ ನಾಟಕ ನಡೆದರೆ ಮಾತ್ರ ಜೀವನಕ್ಕೆ ಇಂತಿಷ್ಟು ಎಂದು ಹಣ ಆಗುತ್ತಿದ್ದ ಕಾಲದಲ್ಲಿ ತಮಗೆ ಇಂತಹ ದಿನವೇ ಇಂತಿಷ್ಟು ಹಣ ಸಿಗುತ್ತದೆ ಎಂಬ ಖಾತ್ರಿಯೂ ಇಲ್ಲದಿರುವಾಗ ಸುಸ್ಥಿರ ಜೀವನಕ್ಕೆ ಸಾಕಾಗುವಷ್ಟು ಆದಾಯ ಇವರಿಗೆ ಬರುತ್ತಿರಲಿಲ್ಲ. "ಇದು ನನ್ನ ಕಥೆಯಷ್ಟೇ ಅಲ್ಲ. ಕಲೆಯನ್ನೇ ನಂಬಿ ಬದುಕಿದ ಲಕ್ಷಾಂತರ ಜನರ ಕತೆಯೂ ಇರಬಹುದೇನೋ. ಕಲಾವಿದರು ಸದಾ ಅಭದ್ರತೆಯ ಭಾವದಲ್ಲೇ ಬದುಕುತ್ತಾರೆ, ನಾನು ಹಾಗೇ ಬದುಕಿದವಳು ಮತ್ತು ಬದುಕುವವಳೂ ಕೂಡ"[15] ಎನ್ನುತ್ತಾರೆ ಬಿ.ಜಯಶ್ರೀ. ಆರ್ಥಿಕ ವಿಷಯದಲ್ಲಂತೂ ಬಹುತೇಕ ರಂಗಕಲಾವಿದೆಯರು ಆರಕ್ಕೇರದೇ ಮೂರಕ್ಕಿಳಿಯದೇ ಪರಿಸ್ಥಿತಿಯನ್ನು ನಿಭಾಯಿಸುವವರು. ಅವರ ಆತ್ಮಕಥೆಗಳನ್ನು ಗಮನಿಸಿದಾಗ ಈ ಅಂಶವನ್ನು ನಾವು ಪ್ರಧಾನವಾಗಿ ಗಮನಿಸಬಹುದು.

**ಕೊನೆ ಟಿಪ್ಪಣಿಗಳು:**

1. ಲಕ್ಷ್ಮಣ ಕೌಂಟೆ, (2015), ಕರ್ನಾಟಕ ವೃತ್ತಿ ರಂಗಭೂಮಿ, ಬೀದರ: ಭುವನೇಶ್ವರ ಪ್ರಕಾಶನ, ಪು.ಸಂ. 306.
2. ಸೀತಾರಾಮಯ್ಯ ಹಾ. ವೆಂ. (ನಿರೂಪಣೆ) ಮತ್ತು ಗುಡಿಹಳ್ಳಿ ನಾಗರಾಜ (ಪರಿಷ್ಕರಣೆ), (1975), ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ, ಪು.ಸಂ. 31–32.
3. ಅದೇ, ಪು.ಸಂ. 55.
4. ಅದೇ, ಪು.ಸಂ. 64.
5. ರವಿ ಬೆಳಗೆರೆ (ನಿರೂಪಣೆ), (2017), ಕಲ್ಪನಾ ವಿಲಾಸ, ಬೆಂಗಳೂರು: ಭಾವನಾ ಪ್ರಕಾಶನ, ಪು.ಸಂ. 10.
6. ಗವೀಶ ಹಿರೇಮಠ (ನಿರೂಪಣೆ), (2007), ನನ್ನ ಬದುಕಿನ ಪುಟಗಳಿಂದ, ಗುಲಬರ್ಗಾ: ಶ್ರೀ ಸಂಗಮೇಶ್ವರ ಮಹಿಳಾ ಮಂಡಳ, ಪು.ಸಂ. 31.
7. ಅದೇ, ಪು.ಸಂ. 28.
8. ಗುಡಿಹಳ್ಳಿ ನಾಗರಾಜ (ನಿರೂಪಣೆ), (2013), ತೆರೆ ಸರಿಯಿತು, ಬೆಂಗಳೂರು: ಬರಹ ಪಬ್ಲಿಷಿಂಗ್ ಹೌಸ್, ಪು.ಸಂ. 92.
9. ವಾಣಿಶ್ರೀ ಎಸ್. ಪಾಟೀಲ, (2001), ಜಿ.ಎನ್. ಅಂಜಲಿ ದೇವಿ, ಪು.ಸಂ. 10.
10. ಗಣೇಶ ಅಮೀನಗಡ (ಸಂಪಾದನೆ), (2019), ರಹಿಮಾನವ್ವ ಕಲ್ಮನಿ, ಪು.ಸಂ. 25.
11. ಗುಡಿಹಳ್ಳಿ ನಾಗರಾಜ (ನಿರೂಪಣೆ), (2019), ಮರಿಯಮ್ಮನಹಳ್ಳಿ ರಂಗಸಿರಿ, ಪು.ಸಂ. 35.
12. ಅದೇ, ಪು.ಸಂ. 53–54.
13. ಅದೇ, ಪು.ಸಂ. 80.
14. ಪ್ರೀತಿ ನಾಗರಾಜ (ನಿರೂಪಣೆ), (2016), ಕಣ್ಣಾಮುಚ್ಚೇ.., ಕಾಡೇ ಗೂಡೇ.., ಧಾರವಾಡ: ಮನೋಹರ ಗ್ರಂಥಮಾಲಾ, ಪು.ಸಂ. 80–81.
15. ಅದೇ, ಪು.ಸಂ. 82.

## ಆಕರ ಗ್ರಂಥಗಳು:

1. ಸೀತಾರಾಮಯ್ಯ ಹಾ. ವೆಂ. (ನಿರೂಪಣೆ) ಮತ್ತು ಗುಡಿಹಳ್ಳಿ ನಾಗರಾಜ (ಪರಿಷ್ಕರಣೆ), (1975), ಅಭಿನಯ ವಿಶಾರದೆ ಮಳವಳ್ಳಿ ಸುಂದರಮ್ಮ, ಬೆಂಗಳೂರು: ಕರ್ನಾಟಕ ನಾಟಕ ಅಕಾಡೆಮಿ.
2. ಗವೀಶ ಹಿರೇಮಠ (ನಿರೂಪಣೆ), (2007), ನನ್ನ ಬದುಕಿನ ಪುಟಗಳಿಂದ, ಗುಲಬರ್ಗಾ: ಶ್ರೀ ಸಂಗಮೇಶ್ವರ ಮಹಿಳಾ ಮಂಡಳ.
3. ಗುಡಿಹಳ್ಳಿ ನಾಗರಾಜ (ನಿರೂಪಣೆ), (2013), ತೆರೆ ಸರಿಯಿತು, ಬೆಂಗಳೂರು: ಬರಹ ಪಬ್ಲಿಷಿಂಗ್ ಹೌಸ್.
4. ಕುಲಕರ್ಣಿ ಕೆ. ಎಸ್. (ಅನುವಾದ), (2016), ನಾಳೀನ ಚಿಂತ್ಯಾಕೆ, ಶಿವಮೊಗ್ಗ: ಅಹರ್ನಿಶಿ ಪ್ರಕಾಶನ.
5. ಪ್ರೀತಿ ನಾಗರಾಜ (ನಿರೂಪಣೆ), (2016), ಕಣ್ಣಾಮುಚ್ಚೇ.., ಕಾಡೇ ಗೂಡೇ.., ಧಾರವಾಡ: ಮನೋಹರ ಗ್ರಂಥಮಾಲಾ.

## ಪರಾಮರ್ಶನ ಗ್ರಂಥಗಳು:

1. ಲಕ್ಷ್ಮಣ ಕೌಂಟೆ, (2015), ಕರ್ನಾಟಕ ವೃತ್ತಿ ರಂಗಭೂಮಿ, ಬೀದರ: ಭುವನೇಶ್ವರ ಪ್ರಕಾಶನ.
2. ವೆಂಕಟಗಿರಿ ದಳವಾಯಿ, (2003), ಕನ್ನಡ ರಂಗಭೂಮಿ ಮತ್ತು ಮಹಿಳೆ, ಬೆಂಗಳೂರು: ಕನಕ ಸಾಹಿತ್ಯ ಪ್ರತಿಷ್ಠಾನ.